<u>**ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ., ಸಂಚಾರಿ ನ್ಯಾಯಾಲಯ.**</u>

<u>**ರಟ್ಟೀಹಳ್ಳಿ.**</u>

<u>**ಸಿ.ಸಿ.ನಂಬರ್‌ಃ 117/2018**</u>

ಸಿಡಬ್ಲ್ಯೂಃ 19

ಪಿಡಬ್ಲ್ಯೂಃ 14

| | | |
|---|---|---|
| ಸಾಕ್ಷಿಯ ಹೆಸರು | : | ಅಶೋಕ ಸಣ್ಣಬೊಮ್ಮಾಜಿ |
| ತಂದೆಯ ಹೆಸರು | : | ಕೊಟ್ರಪ್ಪ |
| ವಯಸ್ಸು | : | 48 ವರ್ಷ |
| ಉದ್ಯೋಗ | : | ಹೆಚ್.ಸಿ.–1434, ಬ್ಯಾಡಗಿ ಪೊಲೀಸ್ ಠಾಣೆ |
| ವಾಸಸ್ಥಳ | : | ಬ್ಯಾಡಗಿ |

ಇಂದು ದಿನಾಂಕಃ 30.07.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

<u>**ಮುಖ್ಯ ವಿಚಾರಣೆಃ**</u> ಮಾನ್ಯ ಎಪಿಪಿಯವರಿಂದಃ

ನಾನು 2015 ರಿಂದ 2022 ವರೆಗೆ ರಟ್ಟಿಹಳ್ಳಿ ಪೋಲಿಸ್ ಠಾಣೆಯಲ್ಲಿ ಹೆಚ್.ಸಿ. ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

1. ದಿನಾಂಕಃ 19.03.2017 ರಂದು ರಾತ್ರಿ ನಾನು ಎಸ್.ಹೆಚ್.ಓ. ಕರ್ತವ್ಯದಲ್ಲಿದ್ದಾಗ ರಾತ್ರಿ 10 ಗಂಟೆಗೆ ಚಾಸಾ–1 ರವರು ಠಾಣೆಗ ಬಂದು ಲಿಖಿತ ಫಿರ್ಯಾದಿ ನೀಡಿದ್ದನ್ನ ಸ್ವೀಕರಿಸಿಕೊಂಡು, ರಟ್ಟೀಹಳ್ಳಿ ಪಿ.ಎಸ್. ಸಿ.ಆರ್. ನಂಬರಃ 34/2017 ಕಲಂ 279, 337, 338, 304–ಎ ಐಪಿಸಿ ಮತ್ತು 34(ಎ) ಮತ್ತು (ಬಿ) ಸಹಕಲಂ 187 ಎಮ್.ವಿ. ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಂಡು ಮೇಲಾಧಿಕಾರಿಗಳಿಗೆ ವಿಷಯ ತಿಳಿಸಿ, ನ್ಯಾಯಾಲಯಕ್ಕೆ ಮೂಲ ಪಿರ್ಯಾದಿಯೊಂದಿಗೆ ಎಪ್.ಐ.ಆರ್. ಚಾಸಾ–20 ರವರ ಮೂಲಕ ಕಳುಹಿಸಿರುತ್ತೇನೆ.

2. ನಂತರ ಸುರಕ್ಷತೆ ದೃಷ್ಟಿಯಿಂದ ವಾಹನವನ್ನು ಠಾಣೆಗೆ ತೆಗೆದುಕೊಂಡು ಬಂದು, ಮೃತ ಮಲ್ಲಮ್ಮಳನ್ನು ರಟ್ಟೀಹಳ್ಳಿ ಸರ್ಕಾರಿ ಶವಾಗಾರಕ್ಕೆ ಹಾಕಿರುತ್ತಾರೆ. ನಂತರ ಚಾಸಾ–22 ರವರಿಗೆ ಮುಂದಿನ ತನಿಖೆಗಾಗಿ ಕಡತ ಕೊಟ್ಟಿರುತ್ತೇನೆ. ಸಾಕ್ಷಿಯು ದೂರಾದ ನಿಪಿ–1 ರ ಮೇಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಸಹಿಯನ್ನು ನಿಪಿ–1(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು ಪ್ರ.ವ.ವ.ಯಾದ ನಿಪಿ–2 ರ ಮೇಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಸಹಿಯನ್ನು ನಿಪಿ–2(ಬಿ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ** ಆರೋಪಿ 1 ರವರ ಪರ ಶ್ರೀ. ವಿ.ವಿ.ಎಮ್. ವಕೀಲರಿಂದಃ

1. ನಿಪಿ-1 ರಲ್ಲಿರುವ ಬರಹ ಹಾಗೂ ಸಹಿ ನೋಡಿದರೆ, ಬರಹ ಚಾಸಾ-1 ರವರದ್ದಲ್ಲ ಎಂದರೆ ನಿಜ. ನಿಪಿ-1 ರಲ್ಲಿ ದಸ್ತೂರು ಸಹಿ ಇಲ್ಲ ಎಂದರೆ ಸರಿ. ಓದಿ, ಹೇಳಿ, ಸಹಿ ಇದೆ ಎಂಬ ಬಗ್ಗೆ ನನ್ನ ಸಹಿ ಇಲ್ಲ ಎಂದರೆ ಸರಿ. ವಾಹನವನ್ನು ಠಾಣಗೆ ತೆಗೆದುಕೊಂಡು ಬಂದಾಗ ಅದೇ ರೀತಿ ರಾತ್ರಿ ಸುಮಾರು 12 ಗಂಟೆ ಆಗಿತ್ತು. ವಾಹನವನ್ನು ಠಾಣೆಯಲ್ಲಿಯೇ ಇಟ್ಟಿರುತ್ತೇವೆ. ಘಟನೆಯ ಮರುದಿನ ಬೆಳಿಗ್ಗೆ 8 ಗಂಟೆಗೆ ಕಡತವನ್ನು ಚಾಸಾ-22 ರವರಿಗೆ ಕೊಟ್ಟಿರುತ್ತೇನೆ. ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಎಲ್ಲಾ ವಿಷಯಗಳು ಸುಳ್ಳು ಎಂದರೆ ಸರಿಯಲ್ಲ.

**ಪಾಟೀ ಸವಾಲುಃ** ಆರೋಪಿ 2 ರವರ ಪರ ಶ್ರೀ. ಜಿ.ಎಸ್.ಎಮ್. ವಕೀಲರಿಂದಃ

1. ದೂರು ದಾಖಲಾಗುವ ಮೊದಲು ನನಗೆ ಅಪಘಾತದ ಬಗ್ಗೆ ಗೊತ್ತಿಲ್ಲ. ವಾಹನವನ್ನು ಠಾಣೆಗೆ ತರುವ ಮೊದಲು ವಾಹನದ ಯತಾಸ್ಥಿತಿ ಪೋಟೋ ವಗ್ಯೆರೆ ತೆಗೆದಿರುತ್ತೀರಿ ಎಂದರೆ ಇಲ್ಲ. ನಿಪಿ-10 ಮತ್ತು 11 ರಲ್ಲಿರುವ ಪೋಟೋಗಳನ್ನು ಯಾರು, ಎಲ್ಲಿ, ಯಾವಾಗ ತೆಗೆದಿರುತ್ತಾರೆ ಎಂದು ನನಗೆ ಮಾಹಿತಿ ಇಲ್ಲ. ಸದರಿ ಪೋಟೋಗಳಲ್ಲಿ ಅಪಘಾತಪಡಿಸಿದ ವಾಹನಗಳು ಕಾಣಿಸುವುದಿಲ್ಲ ಎಂದರೆ ಸರಿ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ನನ್ನ ಸಮಕ್ಷಮ

Sd/-

ಓ ಹೇ ಕೇ ಸರಿ ಇದೆ.

ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ., ಸಂಚಾರಿ
ನ್ಯಾಯಪೀಠ ರಟ್ಟೀಹಳ್ಳಿ.